ತಾಪಮಾನಕ್ಕೆ ಬರಿಮೈಯೊಡ್ಡಿ ದುಡಿಯುತ್ತಲೇ ಇರುತ್ತಾರೆ. ಅವರ ದುಡಿಮೆಯ ಕ್ಷಣಗಳು ಇನ್ನಷ್ಟು ದುಸ್ತರವಾಗಿ ಪರಿಣಮಿಸುತ್ತಿರುವುದಕ್ಕೆ ಶ್ರೀಮಂತ ವರ್ಗವೇ ಕಾರಣ. ಇದು ಕಟು ವಾಸ್ತವ. ಇದೇ ಉದಾಹರಣೆಯು ಜಾಗತಿಕವಾಗಿಯೂ ಅನ್ವಯವಾಗುತ್ತದೆ.

ಹಾಗಿದ್ದರೆ ಏನು ಮಾಡೋಣ? ಇದು ಈಗ ನಮ್ಮೆದುರಿಗಿರುವ ಪ್ರಶ್ನೆ. ಹೀಗೆ ಆರಂಭವಾಗಿರುವ ಈ ಬಿಸಿಗಾಳಿಯು ಮುಂದಿನ ದಿನಗಳಲ್ಲಿ ಕಡಿಮೆಯಾಗುವ ಲಕ್ಷಣವೇನಿಲ್ಲ. ಇದು ಎಲ್‌ನಿನೋ ಪರಿಣಾಮವಾಗಿ ಸೃಷ್ಟಿಯಾಗಿ, ನಮ್ಮ ಭೂಮಿಯನ್ನು ಬಿಸಿ ಮಾಡುತ್ತಿದೆ. ಪ್ರತೀ ವರ್ಷ ಉಷ್ಣತೆಯು ಮತ್ತಷ್ಟು ಹೆಚ್ಚುತ್ತಿದೆ. ಹೊಸ ದಾಖಲೆಗಳನ್ನು ಮತ್ತೆ ಮತ್ತೆ ಮುರಿಯುತ್ತಲೇ ಇರುತ್ತದೆ. ಒಟ್ಟಿನಲ್ಲಿ ಬಿಸಿಯೇರುವಿಕೆಯು ನಿಲ್ಲುವುದಿಲ್ಲ. ಹಾಗಿದ್ದರೆ ಎಷ್ಟು ಉಷ್ಣತೆಯನ್ನು ಮನುಷ್ಯ ತಡೆದುಕೊಳ್ಳಬಹುದು ಎಂಬ ಪ್ರಶ್ನೆ ಈಗ ಎಲ್ಲರ ಮನದಲ್ಲಿ ಮೂಡಬಹುದು.

ವಿಜ್ಞಾನಿಗಳ ಪ್ರಕಾರ 40 ಡಿಗ್ರಿಯಿಂದ 50 ಡಿಗ್ರಿ ಸೆಂಟಿಗ್ರೇಡ್‌ವರೆಗಿನ ಉಷ್ಣತೆಯಲ್ಲಿ ಮನುಷ್ಯರು ಪ್ರಯಾಸದಿಂದ ಜೀವನ ಮಾಡಬಹುದು. ಆದರೆ ಇವು ಕೇವಲ ಸಂಖ್ಯೆಗಳು. ಇದರ ಸುತ್ತ ಅನೇಕ ಇತರ ವಿಚಾರಗಳು ಅವಲಂಬಿಸಿವೆ. ಈ ಅಂದಾಜು ಜಗತ್ತಿನ ಎಲ್ಲ ಭೂ ಪ್ರದೇಶಗಳಿಗೆ ಏಕಪ್ರಕಾರವಾಗಿ ಅನ್ವಯವಾಗದು. ಮನುಷ್ಯನಲ್ಲಿರುವ ಸಹನಾ ಶಕ್ತಿಯು, ಚರ್ಮದ ಬಣ್ಣ, ಆಯಾ ಪ್ರದೇಶದ ಹ್ಯುಮಿಡಿಟಿ, ಜೀವನಶೈಲಿ, ಆ ಊರಿನಲ್ಲಿರುವ ಕಟ್ಟಡಗಳು, ರಸ್ತೆ ಮುಂತಾದ ಸೌಕರ್ಯಗಳು– ಹೀಗೆ ಬೇರೆ ಬೇರೆ ಸಂಗತಿಗಳನ್ನು ಅವಲಂಬಿಸಿದೆ. ತೇವಾಂಶವು ಜಾಸ್ತಿಯಾಗಿದ್ದಾಗ ಉಷ್ಣತೆ ಏರಿದಲ್ಲಿ, ಅದು ಆರ್ದ್ರತೆಯಿಂದ ಕೂಡಿದ ಉಷ್ಣತೆಯಾಗಿರುತ್ತದೆ. ಅಂತಹ ಉಷ್ಣಾಂಶವನ್ನು ಸಹಿಸಿಕೊಳ್ಳುವ ಶಕ್ತಿ ಮನುಷ್ಯನಲ್ಲಿ ಇರುವುದಿಲ್ಲ. ಅಂದರೆ 35 ಡಿಗ್ರಿ ಉಷ್ಣಾಂಶದಲ್ಲಿ ಮನುಷ್ಯರು ಬಾಳುವುದು ಸಾಧ್ಯವಾಗುವುದಿಲ್ಲ. ಇನ್ನು ನಾವು ವಾಸಿಸುವ ವಿಧಾನವು ಮಹತ್ವದ ಪಾತ್ರ ವಹಿಸುತ್ತವೆ. ಬದುಕು ಸಾಧ್ಯವೋ ಇಲ್ಲವೋ ಎನ್ನುವುದು ನಾವು ಧರಿಸುವ ಬಟ್ಟೆ, ನಿರ್ಮಿಸಿರುವ ಕಟ್ಟಡಗಳು, ಬಳಸುತ್ತಿರುವ ಇಂಧನ ಮೂಲ ಯಾವುದು... ಎಂಬೆಲ್ಲ ವಿಚಾರಗಳನ್ನೂ ಅವಲಂಬಿಸಿರುತ್ತದೆ.

ಸೆಕೆಯಾಗುತ್ತಿದೆ ಎಂದಕೂಡಲೇ ಎ.ಸಿ. ಅಳವಡಿಸುವುದರಿಂದ ತಕ್ಷಣಕ್ಕೆ ಪರಿಸ್ಥಿತಿ ತಂಪಾದಂತೆ ಗೋಚರಿಸಿದರೂ, ದೀರ್ಘಕಾಲದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ. ಇದೊಂದು ವಿಷವರ್ತುಲ. ಎ.ಸಿ. ಬಳಸದೆಯೇ ನಮ್ಮ ಮನೆಯನ್ನು ತಂಪಾಗಿಡುವುದು ಹೇಗೆ, ನಗರವನ್ನು ತಂಪಾಗಿಡುವುದು ಹೇಗೆ ಎಂಬ ಬಗ್ಗೆ ಆಲೋಚನೆ ಮಾಡುವುದು ಮುಖ್ಯ. ಹಾಗೆ ನೋಡಿದರೆ ನಾವು ಪ್ರಕೃತಿಯ ಜೊತೆಗೆ ಸಾಗುವ ಉದ್ದೇಶದಿಂದ ಮನೆ, ಕಟ್ಟಡಗಳನ್ನು ಕಟ್ಟಬೇಕು. ಪ್ರಕೃತಿಯನ್ನು ಮಣಿಸುತ್ತೇನೆ ಎಂಬ ಅಹಂನಿಂದ ಯಾವುದೇ ಫಾಯಿದೇ ಇಲ್ಲ.

'ಸೆಂಟರ್ ಫಾರ್ ಸೈನ್ಸ್ ಎಂಡ್ ಎನ್ವಿರಾನ್‌ಮೆಂಟ್'ನ ನನ್ನ ಸಹೋದ್ಯೋಗಿಗಳು ಗುರುತಿಸಿದ ಪ್ರಕಾರ, ಭಾರತದ ನಗರಗಳು ರಾತ್ರಿ ವೇಳೆ ತಂಪಾಗುತ್ತಿಲ್ಲ. ಹಾಗಿದ್ದರೆ ಉಷ್ಣತೆಯನ್ನು ಕಡಿಮೆ ಮಾಡುವ ವಾಸ್ತುವಿಧಾನವನ್ನು ನಾವು ಕಂಡುಕೊಳ್ಳಬೇಕಾಗಿದೆ. ಸಾಂಪ್ರದಾಯಿಕ ಮನೆಗಳನ್ನು ಗಮನಿಸಿದರೆ ಅಲ್ಲಿ ಸೂರ್ಯನ ಬೆಳಕು ನೇರವಾಗಿ ಮನೆಯ ಮೇಲೆ ರಾಚದಂತೆ ಎಚ್ಚರಿಕೆ ವಹಿಸುವ ತಂತ್ರ ಇರುತ್ತದೆ. ಬಾಗಿದ ಛಾವಣಿಯಿರುತ್ತದೆ. ಆದರೆ ಆಧುನಿಕ ಕಟ್ಟಡಗಳು ಗಾಜಿನ ಗೋಡೆಗಳನ್ನು ಹೊಂದಿರುವ ಚೌಕಾಕಾರದ ಬೃಹತ್ ಕಟ್ಟಗಳು. ಇವು ಸೂರ್ಯನ ಬೆಳಕನ್ನು ನೇರವಾಗಿ ಹೀರಿಕೊಳ್ಳುತ್ತವೆ. ಸುಡುಬೇಸಿಗೆಯಲ್ಲಿ, ನಾವು ಹಳೇ ಕಾಲದ ಮನೆಯ ಒಂದು ಕೊಠಡಿಯೊಳಗೆ ಪ್ರವೇಶಿಸಿದಾಗ ತಂಪಾದ ಅನುಭವ ಉಂಟಾಗುತ್ತದೆ. ಅಂದರೆ, ಅಲ್ಲಿ ಉಷ್ಣತೆ ಕಡಿಮೆಯಿದೆ ಎಂದರ್ಥವಲ್ಲ. ಬದಲಾಗಿ, ಗಾಳಿಯ ದಿಕ್ಕನ್ನು ಗುರುತಿಸಿಕೊಂಡು ಆ ಕಟ್ಟಡವನ್ನು ಕಟ್ಟಲಾಗಿರುತ್ತದೆ. ಹಾಗಾಗಿ ನಮ್ಮ ಚರ್ಮ ತಕ್ಷಣವೇ ಉಸಿರಾಡಲು ಬೇಕಾದಷ್ಟು ಗಾಳಿ ಅಲ್ಲಿರುತ್ತದೆ. ಬಿಸಿಗಾಳಿಯನ್ನು ತಡೆಯಲು ಹೀಗೆ ನಮ್ಮ ಜೀವನಶೈಲಿಯ ಆಮೂಲಾಗ್ರ ಬದಲಾವಣೆ ಮಾಡಿಕೊಳ್ಳುವುದು ಸಾಧ್ಯವೇ? ■



**island**) ಪರಿವರ್ತನೆಯಾಗುತ್ತವೆ. ಅಲ್ಲಿ ವಾಸಿಸುವ ಪ್ರಾಣಿಪಕ್ಷಿಗಳ ಸಂಕುಲಕ್ಕೆ ಆತಂಕ ಎದುರಾಗುತ್ತದೆ. ಹಸಿವಸ್ತುಗಳನ್ನು ಕೊಳೆಸುವ ಜೀವಿಗಳು ಮಾಯವಾಗಿಬಿಡುತ್ತವೆ. ದೂಳಿನ ಕೂಪದಲ್ಲಿ ಉಸಿರಾಡಲು ಗಾಳಿಯು ಸಾಕಷ್ಟು ಸಿಗದೇ ಇರುವುದರಿಂದ ಬಾಳು ಅಸಹನೀಯವಾಗುತ್ತದೆ. ಅಂದರೆ ಮನುಷ್ಯರು ಜೀವಕ್ಕಿಂತ ಮಿಗಿಲಾಗಿ ಪ್ರೀತಿಸುವ ಆರ್ಥಿಕತೆಯು ಕುಸಿದು ಬೀಳುತ್ತದೆ.

ಮನುಷ್ಯನ ದೇಹವು ಬಿಸಿಯೇರಿದಾಗ, ತಂಪಾಗುವುದಕ್ಕೆ ತನ್ನದೇ ಆದ ಕ್ರಮವನ್ನು ಹೊಂದಿದೆ. ಬೆವರಿದಾಗ ದೇಹದೊಳಗಿನ ಉಷ್ಣಾಂಶ ನಷ್ಟವಾಗಿ, ದೇಹದ ತಾಪಮಾನ ಸಮತೋಲನಕ್ಕೆ ಬರುತ್ತದೆ. ಆದರೆ ಒಂದು ಪ್ರದೇಶದ ಹ್ಯುಮಿಡಿಟಿ (ತೇವಾಂಶ) ಜಾಸ್ತಿಯಿದ್ದರೆ, ದೇಹದಿಂದ ಹೊರಸೂಸುವ ಬೆವರು ಬೇಗನೇ ಆವಿಯಾಗುವುದಿಲ್ಲ. ಉದಾಹರಣೆಗೆ, ಹೆಚ್ಚು ಉಷ್ಣಾಂಶವಿದ್ದರೂ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬೆವರು ನೀರಾಗಿ ಹರಿಯುವುದಿಲ್ಲ. ಅದು ಆವಿಯಾಗಲು ಬೇಕಾದಷ್ಟು ಗಾಳಿಯ ಓಡಾಟ ಅಲ್ಲಿರುತ್ತದೆ. ಅಂದರೆ ಆ ಪ್ರದೇಶದ ಹ್ಯುಮಿಡಿಟಿ ಕಡಿಮೆಯಿರುತ್ತದೆ. ಆದರೆ, ಕರಾವಳಿ ಪ್ರದೇಶಗಳಲ್ಲಿ ಹ್ಯುಮಿಡಿಟಿಯು ಹೆಚ್ಚಿರುವುದರಿಂದ, ಉಷ್ಣಾಂಶವು 30 ಡಿಗ್ರಿಯ ಆಸುಪಾಸಿನಲ್ಲಿದ್ದಾಗ್ಯೂ ಅದನ್ನು ತಾಳಿಕೊಳ್ಳುವುದು ಕಷ್ಟವಾಗುತ್ತದೆ. ವಾತಾವರಣದ ತೇವಾಂಶವು ಗಾಳಿಯ ಸುರಳೀತ